SRI M.C. NANAIAH : Election will be held and direction has already been issued and all process will be started immediately.

ಅಧ್ಯಕ್ಷರು : ತಾವು ದಯಮಾಡಿ ಆ ಹಾಸ್ಟೆಲ್ಸ್ ವಿಚಾರದಲ್ಲಿ ಹೇಳಿ.

ಋ) ಬಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಕ್ಕೆ ಸೇರಿದ ಹಾಸ್ಟೆಲ್‌ಗಳನ್ನು ರದ್ದು ಮಾಡಿರುವುದು.

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದಂಥ ಹಾಸ್ಟೆಲ್‌ಗಳನ್ನು ರದ್ದು ಮಾಡಿದ್ದಾರೆ. ಅವರ ಸರ್ಕಾರಿ ಆಜ್ಞೆ ಸಕಾಇ 131 ಪಕಕ 95 ದಿನಾಂಕ 6.7.96 ರಂದು 13 ಅನುದಾನಿತ ವಿದ್ಯಾರ್ಥಿನಿಯಗಳ ಮಂಜೂರಾತಿಯನ್ನು ವಜಾ ಮಾಡಲಾಗಿದೆ. ಇವುಗಳಲ್ಲಿ ಬಹಳಷ್ಟು ವಿದ್ಯಾರ್ಥಿನಿಲಯಗಳು ಲಂಬಾಣಿ ಜನಾಂಗಕ್ಕೆ ಸೇರಿದಂಥವುಗಳು. ಇದು ಆಗಿರುವುದು. 6.7.96 ರಂದು ಇನ್ನೊಂದು ಸಕಇ 56 ಪಸ 95 ಬೆಂಗಳೂರು, ದಿನಾಂಕ 29.7.95 ಮತ್ತೊಂದು 16 ವಿದ್ಯಾರ್ಥಿನಿಲಯಗಳ ಮಂಜೂರಾತಿಯನ್ನು ರದ್ದುಮಾಡಿದ್ದಾರೆ. ಮತ್ತೆ ಮೂರು ವಸತಿನಿಲಯಗಳ ಸಂಖ್ಯಾಬಲವನ್ನು ಕಡಿಮೆ ಮಾಡಿದ್ದಾರೆ. ಅಂದರೆ ಬಿಜಾಪುರದ ಒಂದೇ ಜಿಲ್ಲೆಯ 29 ಹಾಸ್ಟೆಲ್‌ಗಳನ್ನು ರದ್ದು ಮಾಡಿದ್ದಾರೆ. ಈ ವಸತಿ ನಿಲಯಗಳು ಕಾನೂನಿಗೆ ವಿರುದ್ಧವಾಗಿ ಮೂಲಭೂತ ಸೌಕರ್ಯಗಳನ್ನು ಹೊಂದಿಲ್ಲದ ಕಾರಣ ವಜಾ ಮಾಡಿದ್ದೇವೆ ಎಂದು ಹೇಳಿ ಕಾರಣ ಕೊಟ್ಟಿದ್ದಾರೆ. ನಾನು ವಿನಂತಿ ಮಾಡುತ್ತೇನೆ, ತಾವು ನೋಡಿ. ಈ ಹಾಸ್ಟೆಲುಗಳಲ್ಲಿ ವ್ಯವಸ್ಥೆ ಸರಿಯಿಲ್ಲದಿದ್ದರೆ ಒಂದು ನೋಟೀಸ್ ಕೊಡಿ. ಒಂದೂ ನೋಟೀಸ್ ಕೊಡದೇನೆ ಸುಮಾರು 29 ಹಾಸ್ಟೆಲ್‌ಗಳನ್ನು ಬಹುತೇಕ ಬಣಜಾರ ಸಮಾಜಕ್ಕೆ ಸೇರಿದಂಥ ಹಾಸ್ಟೆಲ್‌ಗಳನ್ನು ತಾವು ರದ್ದುಮಾಡಿದ್ದೀರಿ. ನನ್ನದು ಇಷ್ಟೇ ವಿನಂತಿ. ನಾನು ಬಿಜಾಪುರ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ, ನಿಜಕ್ಕೂ ನನಗೆ ನಿಮ್ಮ ಆಡಳಿತ ರೀತಿ ನೋಡಿ ತಲೆತಗ್ಗಿಸುವಂತಾಯಿತು. ನಿಮ್ಮದು ಆಡಳಿತ ಪಕ್ಷ, ನನ್ನದು ವಿರೋಧ ಪಕ್ಷ ಎಂದು ನನಗೆ ಅನ್ನಿಸಲಿಲ್ಲ. ಇದು ಸಾಧ್ಯವೇ ಎಂದು ಒಂದು ವೇಳೆ ಸರ್ಕಾರ ಸೇಡುತೀರಿಸಿ ಕೊಳ್ಳುತ್ತಿದೆಯೇನೋ ಎನ್ನುವ ಭಾವನೆ ಬರುತ್ತದೆ. ದಯವಿಟ್ಟು ಅವರಿಗೆ ಹಾಸ್ಟೆಲ್‌ಗಳನ್ನು ಪ್ರಾರಂಭಿಸಲಿಕ್ಕೆ ಹೇಳಿ ಮತ್ತು ನೋಟೀಸ್ ಕೊಡಿ. ತಪ್ಪಾಗಿದ್ದರೆ ಸರಿಪಡಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ, ಈ ಅನುದಾನ ಪಡೆಯುವ ವಸತಿ ನಿಲಯಗಳಿಗೆ ಕೆಲವು ನಿಬಂಧನೆಗಳಿವೆ. ಒಳ್ಳೆಯ ವಸತಿ ಇರಬೇಕು, ನೀರು ಇರಬೇಕು, ತಟ್ಟೆಇರಬೇಕು, ನೌಕರರು ಕೂಡ ಸ್ವಲ್ಪ ವಿದ್ಯಾರ್ಹತೆಯನ್ನು ಹೊಂದಿರಬೇಕು ಎನ್ನತಕ್ಕಂಥಾದ್ದು ಇದೆ. ನಮ್ಮ ಅಧಿಕಾರಿಗಳು ಇನ್‌ಸ್ಪೆಕ್ಷನ್‌ಗೆ ಹೋದಾಗ ಸಂಪೂರ್ಣವಾಗಿ ಕೇವಲ 13 ಅಲ್ಲ, 29 ಹಾಸ್ಟೆಲ್‌ಗಳನ್ನು ರದ್ದು ಮಾಡತಕ್ಕಂಥ ಒಂದು ಲಿಸ್ಟ್ ಕಳುಹಿಸಿದ್ದಾರೆ. ಅಲ್ಲಿ ಸರಿಯಾದ ವಸತಿ ಇಲ್ಲ, ನೌಕರರು ಇಲ್ಲ ತಟ್ಟೆ ಇಲ್ಲ, ವಿದ್ಯಾರ್ಥಿಗಳು ಕೂಡ ಅಲ್ಲಿ ಸರಿಯಾದ ರೀತಿಯಲ್ಲಿ ಇಲ್ಲ, ಊಟ ಮಾಡಿ ಬೇರೆ ಕಡೆಗೆ ಹೋಗುತ್ತಾರೆ, ಕೆಲವು ಕಡೆ ವಿದ್ಯಾರ್ಥಿಗಳೇ ಇಲ್ಲ. ಆದರೆ ಅನುದಾನ ಪಡೆಯುವುದಕ್ಕೋಸ್ಕರ ಅಲ್ಲೆಲ್ಲ ಲೆಕ್ಕ ಬರೆಯುತ್ತಾರೆ ಎನ್ನತಕ್ಕಂಥ ಒಂದು ಮಾಹಿತಿ ಬಂದಿದೆ. ಇದಕ್ಕೆ ಏನು ಮಾಡಬೇಕು? ಈಗ ಏನಾದರೂ ಅವರೇ ಒಂದು ಅರ್ಜಿಕೊಟ್ಟರೆ ಇದು ಸರಿಯಾಗಿ ನಡೆಯುತ್ತಿದೆ

ವರದಿ ಸರಿಯಿಲ್ಲ, ನೀವೇ ಇದನ್ನು ವೀಕ್ಷಿಸಿ ಅಥವಾ ಎನ್‌ಕ್ವೈರಿ ಮಾಡಿಕ ಎಂದು ಹೇಳಿದರೆ ಖಂಡಿತವಾಗಿ ಅದರ ಬಗ್ಗೆ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಇದು ನೋಟೀಸ್ ಸರಿ ಇಲ್ಲ ಎಂದರೆ ಸರಿಪಡಿಸೋಣ. ನೋಟೀಸ್ ಕೊಟ್ಟರೂ ಕೂಡ ಸರಿಮಾಡದಿದ್ದರೆ ನೀವು ಬೇಕಾದದ್ದು ಮಾಡಿ. ನಿಮಗೆ ಹೇಳುತ್ತೇನೆ.

ಅಧ್ಯಕ್ಷರು : ಯಡಿಯೂರಪ್ಪನವರೇ, ಅವರು ಒಂದು ವಿಚಾರವನ್ನು ಹೇಳಿದರು. ಹಾಸ್ಟೆಲ್ ಮ್ಯಾನೇಜ್‌ಮೆಂಟ್‌ಗೆ ನೋಟೀಸ್ ಕೊಡುವುದು ಬೇರೆ ಪ್ರಶ್ನೆ. ಹಾಸ್ಟೆಲ್‌ನಲ್ಲಿ ಇರತಕ್ಕಂಥ ಇನ್‌ಮೇಟ್ಸ್ - ಸ್ಟೂಡೆಂಟ್ಸ್ ನಮಗೆ ಫೆಸಿಲಿಟೀಸ್ ಸರಿಯಿಲ್ಲ ಎಂದು ಹೇಳಿದರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್. ಅದಕ್ಕೇ ನಾನು ಹೇಳಿದ್ದುದು. ನಾನು ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಇಲ್ಲಿ ಮಾತನಾಡುತ್ತಿದ್ದೇನೆ. ಒಂದು ನೋಟೀಸೂ ಸರ್ವ್ ಮಾಡಿಲ್ಲ. ನಾನು ವಿದ್ಯಾರ್ಥಿಗಳನ್ನು ಕಂಡಿದ್ದೇನೆ. ಇವುಗಳು ಒಂದೇ ಸಮಾಜಕ್ಕೆ ಸೇರಿದಂಥಾದ್ದು.

ಅಧ್ಯಕ್ಷರು : ಸೇಡಿನ ಮನೋಭಾವನೆಯಿಂದ ಮಾಡಿದ್ದಾರೆ ಎಂದು ಹೇಳುತ್ತೀರೋ?

ಶ್ರೀ ಬಿ.ಎಸ್. ಯಡಿಯೂರಪ್ಪ : ಹಿಂದಿನ ಸಚಿವರೊಬ್ಬರು ಹಾಸ್ಟೆಲ್ ಇಲ್ಲದೇ ನಾಲ್ಕು ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ. ನಾನು ರಾಜಕೀಯ ತರುವುದಕ್ಕೆ ಇಷ್ಟಪಡುವುದಿಲ್ಲ. ಇದು ಧರ್ಮವೇ?

MR. SPEAKER : I will guide him. Probably for political reasons.ಮಾಡಿರಬಹುದು. Kindly look into the matter personally.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಅವರು ಏನಾದರೂ ಅರ್ಜಿ ಕೊಟ್ಟು ....

11.30 ಎ.ಎಂ.

ಶ್ರೀ ವೈ. ರಾಮಕೃಷ್ಣ : ಇನ್‌ಸ್ಪೆಕ್ಷನ್‌ಗೆ ಕಳುಹಿಸಿಕೊಟ್ಟಿದ್ದೆವು ಎಂದು ಹೇಳಿದರು. ಇಡೀ ರಾಜ್ಯದಲ್ಲೆಲ್ಲಾ ಇನ್‌ಸ್ಪೆಕ್ಷನ್‌ಗೆ ಕಳುಹಿಸಿಕೊಡಬೇಕು. ಒಂದೇ ಜಿಲ್ಲೆಯೊಳಗೆ ಒಂದೇ ಕಮ್ಯುನಿಟಿಗೆ ಸೇರಿದ 29 ಹಾಸ್ಟಲುಗಳಿಗೆ ಇನ್‌ಸ್ಪೆಕ್ಷನ್‌ಗೆ ಕಳುಹಿಸಿ ಕ್ಯಾನ್ಸಲ್ ಮಾಡಿರುವುದು, ಇದು ನ್ಯಾಯವೇ ಎಂಬ ಪ್ರಶ್ನೆ ಬರುತ್ತದೆ. ಆದ್ದರಿಂದ ಇದನ್ನು ಪರಿಶೀಲನೆ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಜವಾಗಿಯೂ ಹೇಳಬೇಕೆಂದರೆ ನಾವು ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಇದನ್ನು ಪ್ರತಿಭಟಿಸಿ ನಾವು ಧರಣಿ ಮಾಡಬೇಕಾಗುತ್ತದೆ. ನಾನು ಇಲ್ಲಿ ಕುಳಿತು, ಜವಾಬ್ದಾರಿಯಿಂದ ಪ್ರಸ್ತಾಪ ಮಾಡಿದ್ದೇನೆ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಅಧ್ಯಕ್ಷರೇ, ಹೋದವರ್ಷ ಇದೇ ರೀತಿ ಹೇಳಿದಾಗ, ದೇವದುರ್ಗ ಕ್ಷೇತ್ರದಲ್ಲಿ 30 ಜನ ಮಹಿಳೆಯರಿದ್ದಂಥ ಹಾಸ್ಟಲನ್ನು ಮುಚ್ಚಿಸಿದರು. ಅದು ನನ್ನ ಗಮನಕ್ಕೆ ಬಂದಮೇಲೆ, ಅಲ್ಲೇನು ಅಂತಹ ನ್ಯೂನತೆಗಳು ಇರಲಿಲ್ಲ. ನೋಡಿಕೊಳ್ಳುವ ವಾರ್ಡನ್ ಇಲ್ಲವೆನ್ನುವ ಕಾರಣಕ್ಕೆ ಅಂದರೆ, "ನೆಗಡಿಯಾಗಿದೆ ಎಂದು ಮೂಗು ಕತ್ತರಿಸಿ ಹಾಕುವುದಕ್ಕಾಗುತ್ತದೆಯೇ" ಅವರಿಗೆ ಕೆಲವು ಸೌಲಭ್ಯಗಳನ್ನು ಮಾಡಿಕೊಡಬಹುದು. ಈ ರೀತಿ ಯಾಗುವುದರಿಂದ ವಿದ್ಯಾರ್ಥಿನಿಯರು ಮತ್ತೆ ವಾಪಸ್

ಮನೆಗೆ ಹೋಗುತ್ತಾರೆ. ಅವರ ವಿದ್ಯೆ ಅಲ್ಲಿಗೇ ನಿಂತು ಹೋಗುತ್ತದೆ. ಅದಕ್ಕೋಸ್ಕರ ಏನಾದರೂ ಸಣ್ಣ ಪುಟ್ಟ ಲೋಪದೋಷಗಳು ಇದ್ದರೆ, ಅಲ್ಲಿಯ ಶಾಸಕರಿಗೆ ಹೇಳಿದರೆ ಸೌಲಭ್ಯ ಮಾಡಿಕೊಡುತ್ತಾರೆ. ನಮ್ಮ ಗೌರಿಬಿದನೂರಿಗೆ ಜ್ಯೋತಿರೆಡ್ಡಿಯವರು ನನ್ನನ್ನು ಕರೆದುಕೊಂಡು ಹೋಗಿ ತೋರಿಸಿದರು. ನಮ್ಮ ಹಾಸ್ಪಲಿನಲ್ಲಿ ಕೆಲವು ಸೌಕರ್ಯಗಳು ಇಲ್ಲ, ನೀವು ಮುಚ್ಚಿಸಬೇಡಿ ಎಂದು ಹೇಳಿದಾಗ ನಾವು ಅದನ್ನು ಓಪನ್ ಮಾಡಿಸಿದ್ದೇವೆ. ಮಾನ್ಯ ಅಧ್ಯಕ್ಷರೇ, ಅದು ಈಗ ಚೆನ್ನಾಗಿ ನಡೆಯುತ್ತಿದೆ ನನ್ನಲ್ಲೂ ನಡೆಯುತ್ತಾ ಇದೆ. ನೀವು ಆ ತರಹ ಮುಚ್ಚಿಸಿ, ಅವರ ವಿದ್ಯೆಗೆ ಕಲ್ಲುಹಾಕಬೇಡಿ.

ಅಧ್ಯಕ್ಷರು : ತಾವು ಹೋಗಿ, you please take up personal inspection if your officers have not gone as per the rules.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ರಾಜಕಾರಣ ಎಂದು ಹೇಳಿದರು, ಅದು ನನಗೇನೂ ಇಲ್ಲ. ಸ್ವಲ್ಪ ದಯಮಾಡಿ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ರಾಜಕಾರಣ ಮಾಡುತ್ತಾ ಇಲ್ಲ.

ಶ್ರೀ ಕೆ.ಎಂ. ಕೃಷ್ಣಾ ರೆಡ್ಡಿ : ನಾನು ಬಹುತೇಕವಾಗಿ ಲಂಬಾಣಿ ಹಾಸ್ಪಲುಗಳನ್ನು ರದ್ದು ಮಾಡಿದ್ದೇನೆಂದು ಹೇಳಿದರು. ನನಗೆ ಕೂಡ ಲಂಬಾಣಿ ಜನಾಂಗದವರು ಒಂದು ಮನವಿಯನ್ನು ಕೊಟ್ಟಿದ್ದಾರೆ. ಇದು ಇಂಪಾರ್ಷಿಯಲ್ಲಾಗಿ ಮತ್ತೊಂದು ಅರ್ಜಿ ಕೊಡಲಿ. ಪುನಃ ಪರಿಶೀಲನೆ ಮಾಡುತ್ತೇನೆ. ಅವು ಏನಾದರೂ ಸರಿಯಾಗಿ ಕೆಲಸ ಮಾಡುತ್ತಾ ಇದ್ದರೆ,. ಪುನಃ ಪರಿಶೀಲನೆ ಮಾಡತಕ್ಕ ಜವಾಬ್ದಾರಿಯನ್ನು ವಹಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ನೀವೇನು ರದ್ದುಮಾಡಿದ್ದೀರಿ, ಅದನ್ನು ವಿತ್ ಡ್ರಾ ಮಾಡಿಕೊಳ್ಳಿ. ನಾವೂ ಬರುತ್ತೇವೆ. ನಾವು, ನೀವು ಒಟ್ಟಿಗೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ : ಒಂದು ಸಲಹೆ ತಾವು ಕೊಟ್ಟಿದ್ದೀರಿ, ಬಹಳ ಸಂತೋಷ. ಅಧಿಕಾರಿಗಳ ವರದಿ ಬಗ್ಗೆ, ಮಂತ್ರಿಗಳೇ ಹೋಗಿ ಸ್ಥಳ ಪರಿಶೀಲನೆ ಮಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿಯವರೆಗೆ ದಯಮಾಡಿ ಈ ಆಜ್ಞೆಯನ್ನು ವಿತ್ ಡ್ರಾ ಮಾಡಿಕೊಳ್ಳಿ.

ಶ್ರೀ ಕೆ.ಎಂ. ಕೃಷ್ಣಾ ರೆಡ್ಡಿ : ನೀವೂ ಕೂಡ ನನ್ನ ಜೊತೆ ಬನ್ನಿ, ಸ್ಥಳ ಪರೀಕ್ಷೆ ಮಾಡೋಣ. ವಿಷದವಾಗಿ ಎಲ್ಲಾ ಅಧಿಕಾರಿಗಳೂ ಅದನ್ನು ಪರಿಶೀಲನೆ ಮಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿಯವರೆಗೆ ಈ ಆಜ್ಞೆಯನ್ನು ರದ್ದುಮಾಡಿ, ವಿತ್ ಡ್ರಾ ಮಾಡಿಕೊಳ್ಳಿ. ಅಲ್ಲಿ ಹಾಸ್ಪಲೇ ಇಲ್ಲದಿದ್ದರೆ. ನೀವು ಹೋಗಿ ಯಾರನ್ನು ನೋಡುತ್ತೀರಿ ?

ಶ್ರೀ ಶಿವಾನಂದ ಸಿದ್ಧರಾಮಪ್ಪ ಪಾಟೀಲ್ : ನಿಜವಾಗಿಯೂ ಇದನ್ನು ಪುನರ್ ಪರಿಶೀಲನೆ ಮಾಡತಕ್ಕ ಅವಶ್ಯಕತೆ ಇದೆ. ಏಕೆಂದರೆ 38 ಸಾವಿರ ಬಂಜಾರ ಸಮಾಜದವರು ನನ್ನ ಮತಕ್ಷೇತ್ರದಲ್ಲಿದ್ದಾರೆ. ಅಲ್ಲಿರತಕ್ಕ ಹಾಸ್ಪಲುಗಳೂ ಬಂದ್ ಆಗಿರುತ್ತವೆ ಇದರ ಬಗ್ಗೆ ಶಾಸಕರ ಸಭೆಯಲ್ಲೂ ಕೂಡ ನಾನು ಹೇಳಿದ್ದೇನೆ. ಬಿ.ಸಿ.ಎಂ. ಹಾಸ್ಪಲುಗಳನ್ನು ತ್ವರಿತವಾಗಿ ಷಿಫ್ಟ್ ಮಾಡಬೇಕು. ಇದರಲ್ಲೇನು ಪಕ್ಷ ಬೇಧ ಇಲ್ಲ. ಇದು ನನಗೂ ಅದಂಥ ಹಿಂಸೆ. ಬಿಜಾಪುರ ಜಿಲ್ಲೆಯಲ್ಲಿ ಆ

ಸಮಾಜದವರಿಗೆ ಮಾತ್ರ ಆಗಿದೆ. ಬೇರೆಯವರಿಗೆ ಏಕೆ ಈ ರೀತಿ ಆಗಿಲ್ಲ? ನಾನು ಮಂತ್ರಿಯವರಿಗೂ ಕೂಡ ಮನವಿ ಕೊಟ್ಟಿದ್ದೇನೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಮಾನ್ಯ ಸದಸ್ಯರು ತಮ್ಮ ಮನವಿಯನ್ನು ಸರ್ಕಾರಕ್ಕೆ ಪುನಃ ಪರಿಶೀಲನೆ ಮಾಡಬೇಕೆಂದು ಕೊಟ್ಟಿದ್ದಾರೆ. ತಾವು ಕೇಳಿದ್ದೀರಿ, ಸ್ಥಳ ಪರೀಕ್ಷೆ ಮಾಡಿ, ಸರಿಯಾದ ರೀತಿಯಲ್ಲಿ ನಡೆಯತಕ್ಕ ವ್ಯವಸ್ಥೆ ಇದ್ದರೆ ಖಂಡಿತವಾಗಿಯೂ ಅದನ್ನು ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿಯವರೆಗೆ ತಮ್ಮ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳಿ. ಅವು ನಡೆಯುವ ಹಾಗೆ ಮಾಡಿ, ನೀವು ನೋಡಿ ಪರಿಶೀಲನೆ ಮಾಡಿದಮೇಲೆ, ಅಲ್ಲಿ ಅನ್ಯಾಯವೆಂದು ತೀರ್ಮಾನವಾದ ಮೇಲೆ, ಆಗ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ಈಗ ತೆಗೆದುಕೊಂಡಿರುವ ಕ್ರಮವನ್ನು ಹಿಂದಕ್ಕೆ ತೆಗೆದುಕೊಳ್ಳಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಅದು ಅನ್ಯಾಯವೆಂದು ಸರ್ಕಾರದ ಗಮನಕ್ಕೆ ಬಂದರೆ, ಅದು ಸರಿಯಾಗಿದೆ ಎಂಬುದು ಕಂಡುಬಂದರೆ, ಪುನರ್ ಪರಿಶೀಲನೆ ಮಾಡಿ, ಅದಕ್ಕೆ ಮತ್ತೆ ಮಾನ್ಯತೆ ಕೊಡಬಹುದಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಒಂದೇ ಜಿಲ್ಲೆಯಲ್ಲಿ 29 ಹಾಸ್ಟಲುಗಳನ್ನು ಮುಚ್ಚಿದ್ದಾರೆ. ಬೇರೆ ಜಿಲ್ಲೆಯಲ್ಲಿ ಆಗದೇ ಇರತಕ್ಕಂಥಾದ್ದು, ಒಂದೇ ಜಿಲ್ಲೆಯಲ್ಲಿ 29 ಹಾಸ್ಟಲುಗಳಲ್ಲೂ ಅವ್ಯವಹಾರ ಆಗಿರುತ್ತದೆಯೇ? ಇದು ಏಕೆ, ಇದರಲ್ಲಿ ಕೈ ತಪ್ಪಿ ಏನೋ ಅನಾಹುತವಾಗಿದೆ. ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಈಗ ಈ ಆರ್ಡರನ್ನು ರದ್ದುಮಾಡಿ. 29ಹಾಸ್ಟಲುಗಳು ಒಂದೇ ಜಿಲ್ಲೆಯಲ್ಲಿ ಅಷ್ಟು ಹದಗೆಟ್ಟಿರುವುದಿಲ್ಲ. ಇದರಲ್ಲೇನೋ ರಾಜಕೀಯ ಹಿನ್ನೆಲೆ ಇಟ್ಟುಕೊಂಡು ಮಾಡಿರಬೇಕು. ಇದರಲ್ಲಿ ಅನುಮಾನ ಬೇಡ, ನಾವು, ನೀವು ಏಕೆ ಅನುಮಾನ ಪಡೋಣ. ರದ್ದುಮಾಡಿ. ಬೇಕಾದರೆ ಆಮೇಲೆ ತನಿಖೆ ಮಾಡಿ. ದಯವಿಟ್ಟು ನೀವು ಪಟ್ಟು ಹಿಡಿಯಬೇಡಿ. 29 ಹಾಸ್ಟಲು ಆದ್ದರಿಂದ ರದ್ದು ಮಾಡುತ್ತೇವೆಂದು ಏನಾದರೂ ಉತ್ತರ ಹೇಳಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಅಲ್ಲಿಯ ಒಬ್ಬ ಅಧಿಕಾರಿಯಿಂದ ಹಾಸ್ಟಲು ಸರಿಯಾಗಿ ನಡೆಯುತ್ತ ಅಥವಾ ಇಲ್ಲ ಎಂಬ ವರದಿ ಸರ್ಕಾರಕ್ಕೆ ಬಂದಮೇಲೆ, ಅದನ್ನು ಪುನರ್ ಪರಿಶೀಲನೆ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್ : ವರದಿ ಭಂದಮೇಲೆ ತಾವು ನೋಡಿದಿರಾ? ತಾವು ವರದಿಯನ್ನು ನೋಡಿಯೇ ಇಲ್ಲವಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪೆಂಡಿಂಗ್ ಎನ್‌ಕ್ವೈರಿ ಮಾಡಲಿ.

(ಗೊಂದಲ)

ಶ್ರೀ ಚಂದ್ರಕಾಂತ ಬೆಲ್ಲದ್ : ಆ ಜಿಲ್ಲೆಯ ಶಾಸಕರು ಅಧಿಕಾರಿಗಳ ಮೇಲೆ ತೀವ್ರವಾಗಿ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಮಾನ್ಯ ಸದಸ್ಯರಿಂದ ಬೇಕಾದಷ್ಟು ಮನವಿಗಳು ಸರ್ಕಾರಕ್ಕೆ ಬಂದಿವೆ. ಇದು ಸರಿಯಾಗಿ, ಸಕ್ರಮವಾಗಿಲ್ಲ ಎನ್ನತಕ್ಕಂಥದ್ದನ್ನು ಅವರು ಹೇಳಿದ್ದಾರೆ. ಒಂದುಸಾರಿ ರದ್ದಾದಮೇಲೆ ಅದನ್ನು ಪರಿಶೀಲನೆ ಮಾಡುವುದು ಬೇಡವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸುತ್ತೋಲೆಗೆ ವಿರುದ್ಧವಾಗಿ, ಒಬ್ಬ ಸಚಿವರು 4 ಲಕ್ಷ ರೂಪಾಯಿ ಆಸ್ತಿ ಕೊಟ್ಟಿದ್ದಾರೆ. ಆದರೆ ಅಲ್ಲಿ ಹಾಸ್ಟಲೇ ಇಲ್ಲ. ನಾನು ಬೇಕು ಎಂದು ಪ್ರಸ್ತಾಪ ಮಾಡುತ್ತಾ ಇಲ್ಲ.

ಅಧ್ಯಕ್ಷರು : ಒಂದು ನಿಮಿಷ ಕುಳಿತುಕೊಳ್ಳಿ. ಪರಿಹಾರ ಮಾಡುತ್ತೇನೆ. 29 ಹಾಸ್ಟಲುಗಳು ಒಂದೇ ಸಮಾಜಕ್ಕೆ ಸೇರಿದ್ದು, ಒಂದೇ ಜಿಲ್ಲೆಯಲ್ಲಿ ಮಾಡುತ್ತಾರೆ. ಇಲ್ಲಿ ಮಾತ್ರ ಅವ್ಯವಹಾರ ನಡೆದಿದೆಯೇ, ರಾಜ್ಯದಲ್ಲಿ ಬೇರೆ ಎಲ್ಲೂ ಇಲ್ಲವೇ ಎನ್ನತಕ್ಕಂಥ ಮಾತನ್ನು ಹೇಳಿ, ಮೇಲ್ನೋಟಕ್ಕೆ ಇದರಲ್ಲಿ ಏನೋ ಸಂಶಯ ಬರತಕ್ಕ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಅಧಿವೇಶನ ಮುಗಿದ ಮೇಲೆ ತಾವು ಹೋಗತಕ್ಕಂಥಾದ್ದು, ಸ್ಥಳ ತನಿಖೆ ಮಾಡುವಂತಾದ್ದು ಆಗಲಿ. 29 ಹಾಸ್ಟಲುಗಳಲ್ಲ್ ಸುಮಾರು ಜನ ವಿದ್ಯಾರ್ಥಿಗಳು ಇದ್ದಾರೆ. ಎಲ್ಲಾ ಬಂಜಾರ ಸಮಾಜಕ್ಕೆ ಸೇರಿದವರು. ನೀವು ಅಲ್ಲಿಗೆ ಹೋಗಿ, ಅಂತಿಮ ನಿರ್ಣಯ ತೆಗೆದುಕೊಳ್ಳುವವರೆಗೆ, ಈಗ ರದ್ದುಮಾಡಿರತಕ್ಕ ಆದೇಶವೇನಿದೆ, ಅದನ್ನು ತಡೆಹಿಡಿಯಿರಿ. ಹಿಂದಕ್ಕೂ ತೆಗೆದುಕೊಳ್ಳಬೇಕಾಗಿಲ್ಲ, ಅದನ್ನು ಸ್ಟೇ ಮಾಡಿ. ಕೊನೆಪಕ್ಷ ಆರ್ಡರನ್ನು ಸಸ್ಪೆಂಡ್ ಮಾಡಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಮಾನ್ಯ ಅಧ್ಯಕ್ಷರೇ, ತಮ್ಮ ಸಲಹೆಯನ್ನು ಒಪ್ಪುತ್ತೇನೆ. ಆದರೆ, ಒಂದು ಪ್ರಶ್ನೆ ರದ್ದಾಗಿರತಕ್ಕಂತಾದ್ದು ಬರೀ ಲಂಬಾಣಿ ಹಾಸ್ಟಲುಗಳಲ್ಲ. 29 ಹಾಸ್ಟಲುಗಳಲ್ಲಿ ಬೇರೆ ಬೇರೆ ಸಮಾಜದವರೂ ಇದ್ದಾರೆ. ಅವೂ ರದ್ದಾಗಿವೆ. ಈ ಅಧಿವೇಶನವಾದ ತಕ್ಷಣವೇ ಸ್ಥಳ ಪರಿಶೀಲನೆ ಮಾಡಿ, ಬಂದ ತಕ್ಷಣವೇ ಒಂದು ಆಜ್ಞೆಯನ್ನು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಪ್ರತಿಷ್ಟೆಯ ಮೇಲೆ ಏಕೆ ಇದ್ದೀರಿ? ಇದರಲ್ಲಿ ಪ್ರತಿಷ್ಟೆ ಏನಿದೆ? ಇದು ಸರಿಯಲ್ಲ

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಅಲ್ಲಿ ಹಾಸ್ಟಲಿನ ಅಸ್ತಿತ್ವವೇ ಇಲ್ಲದಿದ್ದರೆ, ಮಕ್ಕಳೇ ಇಲ್ಲದಿದ್ದರೆ, ಈಗ ಆರ್ಡರ್ ಮಾಡಿ ನಾನು, ಏನು ಮಾಡಬೇಕು? ಅಲ್ಲಿಯ ಹಾಸ್ಟಲುಗಳಲ್ಲಿ ವಿದ್ಯಾರ್ಥಿಗಳು ಇಲ್ಲವೆನ್ನತಕ್ಕವರದಿ ಇದೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ ಎಲ್ಲರೂ ಏಕೆ ನಿಂತುಕೊಳ್ಳುತ್ತೀರಿ ನೀವು ಅಲ್ಲಿಗೆ ಹೋಗಿ ಸ್ಥಳ ತನಿಖೆ ಮಾಡುವವರೆಗೆ, ಇದನ್ನು ತಡೆಹಿಡಿದು, ಅಲ್ಲಿಗೆ ಹೋದಮೇಲೆ, ನಿಮ್ಮ ಅಧಿಕಾರಿ ಕೊಟ್ಟಿರತಕ್ಕ ಎಲ್ಲಾ ವರದಿ ಸರಿಯಾಗಿದೆ ಎಂದ ಮೇಲೆ, ಅಲ್ಲಿಯೇ ಪತ್ರಿಕಾ ಸಮಾವೇಶ ಕರೆದು ಹೀಗೆ ಹೇಳಿದರು. ವಿಧಾನ ಸಭೆಯಲ್ಲಿ ಹೀಗೆ ಪ್ರಸ್ತಾಪವಾಗಿತ್ತು. ಇಲ್ಲಿಯ ಸ್ಥಿತಿ ಹೀಗಿದೆ ಎಂದು ಎಲ್ಲಾ ವಿವರಣೆ ಮಾಡಿ ಖಾಯಂ ಆಗಿ ರದ್ದು ಮಾಡಿ. ಯಾರಿಗೂ ಬೇಡ ಎಂದು ಹೇಳುವುದಿಲ್ಲ. ನೀವು ಮುಂದಿನವಾರ ಹೋಗಿ. ಅಧಿವೇಶನ 14ನೇ ತಾರೀಖಿಗೆ ಮುಗಿಯುತ್ತದೆ. 15ನೇ ತಾರೀಖು ಸ್ವಾತಂತ್ರ್ಯ ಸಮಾರಂಭ ಮುಗಿಸಿಕೊಂಡು ಆಮೇಲೆ ಹೋಗಿ. ಒಂದು ದಿವಸ ಅನಿರೀಕ್ಷಿತವಾಗಿ ಹೋಗಿ ನೋಡಿಕೊಂಡು ಬನ್ನಿ. 4-5 ದಿವಸಗಳ ಕಾಲ ತಡೆಹಿಡಿದರೆ ಆಗತಕ್ಕಂತಾದ್ದೇನು? ಅಲ್ಲಿಯ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದು ಬೇಡ ಅದರ ಕ್ಷೇಮವನ್ನು ನೋಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳಿದ ಮೇಲೆ, ಅವರು ಉತ್ತರ ಕೊಡಲಿ. ಅವರು ಹೇಳಿ ಬಿಡಲಿ ಅದು ರೆಕಾರ್ಡ್‌ಗೆ ಹೋಗಲಿ.

ಅಧ್ಯಕ್ಷರು : ಅವರು ಒಪ್ಪಿಕೊಂಡಿದ್ದಾರೆ. Mr. Nanaiah, if you don't come to my rescue it becomes impossible for me to run the House. How am I to resolve this question? I am struggling my best to save the time. I have got to put 16 speakers through this place.

ಶ್ರೀ ಎಂ.ಸಿ. ನಾಣಯ್ಯ : ಮಂತ್ರಿಗಳು ಒಪ್ಪಿದ್ದಾರೆ. ಈ ಸದನ ಮುಗಿದ ಮೇಲೆ ನಿಮ್ಮನ್ನೂ ಯಾವುದು 29ಹಾಸ್ಟಲು ರದ್ದು ಮಾಡಿದ್ದಾರೆ ಅಲ್ಲಿಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿಯವರೆಗೆ, 'That order will be kept in abeyance temporarily. ಎಂದು ಮಂತ್ರಿಗಳು ಈಗಾಗಲೇ ಹೇಳಿದ್ದಾರೆ.

2. ಶಾಸನ ರಚನಾ ಕಾರ್ಯ ಕಲಾಪಗಳು

ವಿಧೇಯಕಗಳನ್ನು ಮಂಡಿಸುವುದು

(ಅ) ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕ, 1996
(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):ಮಾನ್ಯ ಅಧ್ಯಕ್ಷರೆ, 1996ನೇ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, 1996ನೇ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1996ನೇ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. *

(ಅ) 1996ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ.
(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ 1996ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, 1996ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

---

* ಅನುಬಂಧ-1